

ಇಬ್ಬರು ಚಿಕ್ಕ ಮಕ್ಕಳು ಇದ್ದಾರೆ. ಏನು ಹೇಳಲಿ ನಾನು?

ಬೇಡ, ನಾನು ಪಟೇಲ್ ನಗರದ ನನ್ನ ಮನೆಗೆ ಹೋಗುತ್ತೇನೆ. ಕೆಲಸದಾಳು, ಕುಕ್ ಇರುತ್ತಾರೆ. ಅವರ ಸಹಾಯ ಪಡೆಯುವೆ. ಆದರೆ ಒಂಟಿಯಾಗಿ ಇರಲು ಏನೋ ಒಂದು ಥರ ಆತಂಕ. ಜೀವನದ ಗಾಡಿಯನ್ನು ಮುಂದೆ ನಡೆಸಲು ಯಾರದ್ದಾದರೂ ಆಸರೆ ಬೇಕು. ಮಗಳೇ ಆಸರೆ ಆಗಬಲ್ಲಳೇ…!

ಬಹುಶಃ ಸುಷ್ಮಾ ನನ್ನ ಮನಸ್ಸಿನ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದಾಳೆ.

ತಕ್ಷಣ ಅವಳು ಹೇಳಿದಳು – 'ಪಪ್ಪ… ನಾನು ಆದಿತ್ಯನಿಗೆ ಎಲ್ಲವನ್ನು ಹೇಳಿದ್ದೇನೆ. ನಿಮ್ಮನ್ನು ನೋಡಲು ಅವನು ಆದಷ್ಟು ಬೇಗ ಇಂಡಿಯಾಗೆ ಬರುತ್ತಾನೆ. ಎಲ್ಲಾ ಫೈನಾನ್ಸ್ ಅನ್ನು ಅವನೇ ಅರೇಂಜ್ ಮಾಡಿದ್ದಾನೆ ಪಪ್ಪ.'

ನನಗೆ ಗೊತ್ತು. ಸುಷ್ಮಾ ನನ್ನನ್ನು ಎಲ್ಲಾ ರೀತಿಯಿಂದಲೂ ಖುಷಿಯಾಗಿಡಲು ಪ್ರಯತ್ನಿಸುತ್ತಿದ್ದಾಳೆ ಅಂತ. ಮಗ ಆದಿತ್ಯ ನನ್ನಿಂದಾಗಿಯೇ ಹೋಗಿದ್ದಾನೆ. ಅದಕ್ಕೆ ಆತ ಇಷ್ಟೊಂದು ಹಟಮಾರಿ. ಅವನು ಬರೋದಿಲ್ಲ. ಏಕೆಂದರೆ ಅವನ ದೃಷ್ಟಿಯಲ್ಲಿ ನಾನೇ ತಪ್ಪಿತಸ್ಥ. ಅವನು ವಿದೇಶಕ್ಕೆ ಹೋದ ಮೇಲೆ ನಾನೇ ಅವನಿಂದ ಅಂತರವನ್ನು ಕಾಯ್ದುಕೊಂಡೆ. ಅವನ ತಾಯಿಯ ಪ್ರೀತಿಯೂ ಅವನಿಗೆ ದೊರೆಯದಂತೆ ಮಾಡಿದೆ.

ನನ್ನ ರಿಲೀಫ್ ಬಗ್ಗೆ ಮಾತಾಡಲು ಸುಷ್ಮಾ ಡಾಕ್ಟರ್ ಬಳಿಗೆ ಹೋದ ಮೇಲೆ ನನ್ನ ಮನದಲ್ಲಿ ಮತ್ತೊಮ್ಮೆ ಗತಕಾಲದ ನೆನಪುಗಳು ಕಪ್ಪುಮೋಡಗಳ ಹಾಗೆ ಸುಳಿಯಲಾರಂಭಿಸಿದವು. ಆದಿತ್ಯ ನಾನು ಮದುವೆಯಾದ ಹತ್ತು ವರ್ಷಗಳ ಬಳಿಕ ಹುಟ್ಟಿದ. ಅವನ ಅಮ್ಮ ಇದ್ದ ಬದ್ದ ಹತ್ತಾರು ದೇವರುಗಳಿಗೆ ಹರಕೆ ಹೊತ್ತು ಪೂಜೆ, ವ್ರತ ಮಾಡಿ ಮಗನನ್ನು ಪಡೆದಿದ್ದಳು. ವಂಶವೃದ್ಧಿಯಾದ ಆ ದಿನ ಆನಂದಕ್ಕೆ ಮಿತಿಯೇ ಇರಲಿಲ್ಲ. ವೃದ್ಧಾಪ್ಯದಲ್ಲಿ ಮಗ ತಂದೆ–ತಾಯಿಗೆ ಊರುಗೋಲಾಗುತ್ತಾನೆ. ನಮಗೆ ಆ ಊರುಗೋಲು ಆಸರೆಯನ್ನು ಕರುಣಿಸಿದ್ದಕ್ಕಾಗಿ ದೇವರಿಗೆ ಕೋಟಿ ಕೋಟಿ ಪ್ರಣಾಮಗಳನ್ನು ಸಲ್ಲಿಸಿದ್ದೇವೆ. ಅದಾದ ಎರಡು ವರ್ಷಗಳ ಬಳಿಕ ಸುಷ್ಮಾ ಬಂದ ಮೇಲೆ ಮನೆಯಲ್ಲಿ ಕಿಲಕಿಲ ಸದ್ದು ಮೊಳಗಿತು. ನಮ್ಮ ನೀರಸ ಬದುಕಿನಲ್ಲಿ ಹರ್ಷ ಉಕ್ಕಿ ಹರಿಯತೊಡಗಿತ್ತು. ಒಮ್ಮೆ ರಾಮಲೀಲಾ, ಮತ್ತೊಮ್ಮೆ ದೀಪಾವಳಿ ಉತ್ಸವ, ಜಾತ್ರೆ, ಗೊಂಬೆ, ಬಗೆ ಬಗೆಯ ವಸ್ತು, ಆಟಿಕೆ ಖರೀದಿ, ವಿವಿಧ ಆಟ, ರಿಪಬ್ಲಿಕ್ ಡೇ ಪರೇಡ್ ನೋಡಲು ಮಕ್ಕಳನ್ನು ಹೆಗಲ ಮೇಲೆ ಕೂರಿಸಿಕೊಂಡು ತಿರುಗಾಟ… ಅಪ್ಪ, ಅಮ್ಮನ ನಡುವೆಯೇ ಸ್ಪರ್ಧೆ. ಓಹ್…! ಆ ಖುಷಿ… ಆನಂದದಲ್ಲಿ ದಿನ, ತಿಂಗಳು, ವರ್ಷಗಳು ಉರುಳಿ ಹೋದದ್ದೇ ತಿಳಿಯಲಿಲ್ಲ.

ಮಕ್ಕಳ ಶಾಲೆಯ ಓದು ಮುಗಿಸಿ ಕಾಲೇಜು ತಲುಪಿದ್ದರು. ಆದಿತ್ಯ ತುಂಬಾ ಚುರುಕಾಗಿದ್ದ. ದೆಹಲಿಯ ಐ.ಐ.ಟಿ.ಯಲ್ಲಿ ಕಂಪ್ಯೂಟರ್ ಎಂಜಿನಿಯರಿಂಗ್ ಮುಗಿದ ತಕ್ಷಣ ಉನ್ನತ ಶಿಕ್ಷಣಕ್ಕಾಗಿ ಯು.ಎಸ್.ಗೆ ಹೋಗಲು ಸ್ಕಾಲರ್‌ಶಿಪ್ ಪಡೆದು ಸೆಲೆಕ್ಟ್ ಆಗಿದ್ದ. ಏಳು ಸಮುದ್ರದಾಚೆ ಮಗನನ್ನು ಕಳುಹಿಸಲು ಅಮ್ಮ ಸುತಾರಂ ಒಪ್ಪುತ್ತಿರಲಿಲ್ಲ. ಆದಿತ್ಯ ಐ.ಐ.ಟಿ.ಗೆ ಮುಂಬೈನಲ್ಲಿ ಸೆಲೆಕ್ಟ್ ಆಗಿದ್ದಾಗ ಅದು ಬಿಟ್ಟು ದಿಲ್ಲಿಯಲ್ಲಿಯೇ ಓದು ಮುಂದುವರೆಸಲು ನಿರ್ಧರಿಸಿದ್ದು ಅಮ್ಮನಿಗೆ ಖುಷಿಯನ್ನೇ ತಂದಿತ್ತು. ಆತ ಇನ್ನು ದೂರ ಹೋಗಲಾರ ಎಂದು ಆಕೆ ನಂಬಿದ್ದಳು. ನಾವು ದಿನ ಬಿಟ್ಟು ದಿನ ಆತನಿಗೆ ಹಾಗೂ ಆತನ ಸಹೋದರನಿಗೆ ವಿಶೇಷ ಊಟ, ತಿನಿಸು ತೆಗೆದುಕೊಂಡು ಪಟೇಲ್ ನಗರದಿಂದ ಐ.ಐ.ಟಿ. ಸೆಂಟರ್‌ಗೆ ಹೋಗುತ್ತಿದ್ದೆವು. ಪ್ರತೀ ವೀಕೆಂಡ್‌ನಲ್ಲಿ ಆತನನ್ನು ಕಾರಿನಲ್ಲಿ ಮನೆಗೆ ಕರೆದುಕೊಂಡು ಬರುತ್ತಿದ್ದರು.

'… ನೀವು ಅವನಿಗೆ ಸರಿಯಾಗಿ ತಿಳಿಹೇಳಿ ಅಂದ್ರೆ…! ನಮ್ಮ ದೇಶದಲ್ಲಿಯೇ ಅವನು ವ್ಯಾಸಂಗ ಮಾಡಲಿ. ಅಮೆರಿಕದಲ್ಲಿ ಅದೆಂಥ ವಿಶೇಷ ಸ್ಟಡಿ ಮಾಡೋದಿದೆ?' ಎಂದು ಪತ್ನಿ ನನ್ನನ್ನು ಒತ್ತಾಯಿಸುತ್ತಿದ್ದಳು.

'… ಅವನೀಗ ಬೆಳೆದಿದ್ದಾನೆ. ಎಲ್ಲ ಅವನಿಗೆ ತಿಳಿಯುತ್ತದೆ. ನಾನು ತಡೆದರೂ ಅವನು ನಿಲ್ಲುವವನಲ್ಲ. ಸ್ಟೈನ್‌ಫೋರ್ಡ್ ಯೂನಿವರ್ಸಿಟಿಯಲ್ಲಿ ಸೆಲೆಕ್ಟ್ ಆಗುವುದೆಂದರೆ ಅದೃಷ್ಟವೇ ಸರಿ. ಎಲ್ರೂ ಆದಿತ್ಯನಿಗೆ ಕಂಗ್ರಾಟ್ಸ್ ಹೇಳುತ್ತಿದ್ದಾರೆ. ಹೋಗಲಿ ಬಿಡು…' ನಾನು ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸಿದೆ.

ಸುಷ್ಮಾ ಅಂತೂ ಅಣ್ಣನ ಪರವಾಗಿಯೇ ನಿಂತು ಅವನು ಯು.ಎಸ್.ಗೆ ಹೋಗಲು ಎಲ್ಲಾ